# Current affairs of 2018-07-25 by KPSCVAANI.com

## * ಹವಾಮಾನ ಬದಲಾವಣೆ ಪ್ರಯೋಗಾಲಯಕ್ಕೆ ಚಾಲನೆ

ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆಯಲ್ಲಿ ಹವಾಮಾನ ಬದಲಾವಣೆ ಪ್ರಯೋಗಾಲಯವನ್ನು ಉದ್ಘಾಟಿಸಲಾಯಿತು. ಮಣ್ಣು, ಸಸ್ಯವರ್ಗ, ಸೂಕ್ಷ್ಮ ಜೈವಿಕ ಅಧ್ಯಯನಗಳ ವಿಶ್ಲೇಷಣೆಯನ್ನು ಇಲ್ಲಿ ಕೈಗೊಳ್ಳಲಾಗುತ್ತದೆ. ದೀರ್ಘಕಾಲದ ಪರಿಣಾಮದ ಅಧ್ಯಯನಕ್ಕಾಗಿ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಲ್ಲಿ ಶಾಶ್ವತ ಸಂರಕ್ಷಣಾ ಸ್ಥಳವನ್ನು ರೂಪಿಸಲಾಗಿದೆ. ಇಲ್ಲಿ ವಿವಿಧ ಜಾತಿಯ ಸಸ್ಯಗಳು, ಅವು ಹೀರಿಕೊಳ್ಳುವ ಇಂಗಾಲದ ಪ್ರಮಾಣ, ಹವಾಮಾನ ಬದಲಾದಂತೆ ಅವು ಸ್ಪಂದಿಸುವ ರೀತಿಯನ್ನು ವಿವರವಾಗಿ ಅಧ್ಯಯನ ಮಾಡಲಾಗುತ್ತದೆ. ನೀರಿನ ವಿಶ್ಲೇಷಣೆ, ಸೂಕ್ಷ್ಮ ಜೀವಾಣುಶಾಸ್ತ್ರ ಪ್ರಯೋಗಾಲಯವೂ ಇಲ್ಲಿದೆ. ನೀರಿನ ಗುಣಮಟ್ಟಕ್ಕೆ ಸಂಬಂಧಿಸಿ 23 ಮಾನದಂಡಗಳನ್ನು ವಿಶ್ಲೇಷಿಸುವ ಅವಕಾಶ ಇಲ್ಲಿದೆ. 35 ಅತ್ಯಾಧುನಿಕ ಉಪಕರಣಗಳು 100 ಕೋಟಿ ರೂ ಕೇಂದ್ರ ಸರ್ಕಾರವು ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆಗೆ ಮಂಜೂರು ಮಾಡಿದ ಅನುದಾನ 23 ಮಾನದಂಡಗಳಲ್ಲಿ ನೀರಿನ ಗುಣಮಟ್ಟಕ್ಕೆ ಸಂಬಂಧಿಸಿ ವಿಶ್ಲೇಷಿಸುವ ಅವಕಾಶ ಪ್ರಮುಖ ಉಪಕರಣಗಳು : ಮಣ್ಣಿನ ತೇವಾಂಶ ಅಳೆಯುವ ಮೀಟರ್ ಟೆಲಿಮೆಟ್ರಿಕ್ ಹವಾಮಾನ ಕೇಂದ್ರ ಜಲಶುದ್ದೀಕರಣ ಘಟಕ ರಕ್ತಾತೀತ ಕಿರಣ ಬಳಸಿ ಅನಿಲ ವಿಶ್ಲೇಷಣೆ ಅತ್ಯಾಧುನಿಕ ಸ್ಥಿರ ಹಾಗೂ ವಿಡಿಯೊ ಕ್ಯಾಮೆರಾಗಳು

## * ನವೆಂಬರ್‌ನಲ್ಲಿ ‘ಟೆಕ್ ಸಮ್ಮೇಳನ‘

ಜಾಗತಿಕ ಬಂಡವಾಳ ಹೂಡಿಕೆದಾರರ ಸಮ್ಮೇಳನಕ್ಕೆ ಬದಲಾಗಿ ಈ ಬಾರಿಯೂ ಬೆಂಗಳೂರಿನಲ್ಲಿ ಟೆಕ್ ಸಮ್ಮೇಳನ ಆಯೋಜಿಸಲಾಗುವುದು ನವೆಂಬರ್‌ನಲ್ಲಿ ನಡೆಯಲಿರುವ ಸಮ್ಮೇಳನದಲ್ಲಿ ಹಲವು ದೇಶಗಳ ಹೂಡಿಕೆದಾರ ರು ಪಾಲ್ಗೊಳಲಿದ್ದಾರೆ. ಮೈಸೂರಿನಲ್ಲಿ ಸದ್ಯದಲ್ಲೇ 10 ಬೃಹತ್ ಕೈಗಾರಿಕೆಗಳು ಸ್ಥಾಪನೆಯಾಗಲಿದ್ದು, 4 ಸಾವಿರ ಕೋಟಿ ಬಂಡವಾಳ ಹೂಡಿಕೆಯಾಗಲಿದೆ. ಸುಮಾರು 35 ಸಾವಿರ ಉದ್ಯೋಗಾವಕಾಶಗಳು ದೊರೆಯಲಿವೆ.

## * ನರಸಾಪುರದಲ್ಲಿ ಐಫೋನ್ ತಯಾರಿಕಾ ಘಟಕ ಶೀಘ್ರ



* ಕೋಲಾರ ಜಿಲ್ಲೆಯ ನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ತೈವಾನ್‌ನ ವಿ, ವಿಸ್ಟ್ರನ್ ಟೆಕ್ನಾಲಜೀಸ್ ಕಂಪನಿ 3,000 ಕೋಟಿ ಹೂಡಿಕೆ ಮಾಡಲಿದೆ. * ನರಸಾಪುರದಲ್ಲಿ 43 ಎಕರೆಯಲ್ಲಿ ಪ್ರಾರಂಭವಾಗಲಿರುವ ಐಫೋನ್ ತಯಾರಿಕಾ ಘಟಕವು ರಾಷ್ಟ್ರದಲ್ಲಿಯೇ ಅತಿ ದೊಡ್ಡ ಯೋಜನೆಯಾಗಿದೆ.

## * ಸೌರ ಒಕ್ಕೂಟಕ್ಕೆ ಮ್ಯಾನ್ಮಾರ್ ಸೇರ್ಪಡೆ

ಭಾರತ ನೇತೃತ್ವದ ಅಂತಾರಾಷ್ಟ್ರೀಯ ಸೋಲಾರ್ ಒಕ್ಕೂಟಕ್ಕೆ ಇತ್ತೀಚೆಗಷ್ಟೇ ಮ್ಯಾನ್ಮಾರ್ ಸೇರ್ಪಡೆಯಾಗಿದೆ. ಈ ಮೂಲಕ ಒಕ್ಕೂಟದ ಒಟ್ಟು ಸದಸ್ಯ ರಾಷ್ಟ್ರಗಳ ಸಂಖ್ಯೆ 68ಕ್ಕೆ ಏರಿದೆ. ಏನಿದು ಐಎಸ್‌ಎ : ಪಳೆಯುಳಿಕೆ ಇಂಧನಗಳ ಮೇಲಿನ ಅವಲಂಬನೆ ಕಡಿತಗೊಳಿಸಿ ಸೌರ ವಿದ್ಯುತ್ ಬಳಕೆ ಹೆಚ್ಚಿಸಲು ವಿಶ್ವ ರಾಷ್ಟ್ರಗಳು ರೂಪಿಸಿದ ಸಂಘಟನೆ ಇದಾಗಿದೆ. ಐಎಸ್‌ಎ ಉದ್ದೇಶಗಳು : 2030 ವೇಳೆಗೆ 1ಸಾವಿರ ಗಿಗಾವ್ಯಾಟ್ ಸೌರ ವಿದ್ಯುತ್ ಉತ್ಪಾದನೆ. ಸೌರ ವಿದ್ಯುತ್ ಕ್ಷೇತ್ರದಲ್ಲಿ 1 ಸಾವಿರ ಬಿಲಿಯನ್ ಡಾಲರ್ ಬಂಡವಾಳ ಆಕರ್ಷಿಸುವುದು. ಸೋಲಾರ್ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳ ಸ್ಥಾಪನೆ ಸೌರ ಶಕ್ತಿ ಉಪಕರಣಗಳ ಬೆಲೆ ಕಡಿತ ಚರ ವಿದ್ಯುತ್ ಯೋಜನಗಳಿಗೆ ಆರ್ಥಿಕ ನೆರವು. ಸಾಂಪ್ರದಾಯಿಕ ಶಕ್ತಿ ಮೂಲಗಳ ಅವಲಂಬನೆ ಕಡಿತ.

## * ವಿದೇಶಿ ಸಂಸ್ಥೆ ಗಳಿಂದ ಅತ್ಯಧಿಕ ಪೇಟೆಂಟ್

ಉತ್ಪನ್ನ ಮತ್ತು ಅನ್ವೇಷಣೆಗೆ ಸಂಬಂಧಿಸಿ ದೇಶದಲ್ಲಿ ಪೇಟೆಂಟ್ ಪಡೆದುಕೊಂಡಿರುವ ಸಂಸ್ಥೆಗಳ ಪೈಕಿ ವಿದೇಶಿ ಸಂಸ್ಥೆಗಳೇ ಅತ್ಯಧಿಕ ಸಂಖ್ಯೆಯಲ್ಲಿವೆ. ಜತೆಗೆ ಅಮೆರಿಕ ಮೂಲದ ಕ್ವಾಲ್ ಕೊಮ್ ಸಂಸ್ಥೆಯೊಂದೇ 2016-17ನೇ ಸಾಲಿನಲ್ಲಿ ಒಟ್ಟು 1,840 ಪೇಟೆಂಟ್‌ಗಳಿಗೆ ಅರ್ಜಿ ಸಲ್ಲಿಸಿದೆ. ದೇಶದ ಎಲ್ಲ ಪ್ರಯೋಗಾಲಯಗಳು ಸಲ್ಲಿಸಿದ ಒಟ್ಟು ಪೇಟೆಂಟ್‌ಗಳ ಸಂಖ್ಯೆ 781 ಮಾತ್ರ ಆಗಿದ್ದು, ವಿದೇಶಿ ಸಂಸ್ಥೆಯೊಂದೇ ಭಾರತದಲ್ಲಿ ಅತ್ಯಧಿಕ ಸಂಖ್ಯೆಯ ಪೇಟೆಂಟ್‌ಗಳನ್ನು ಹೊಂದುತ್ತಿದೆ ದೇಶದಲ್ಲಿ ಡಿಆರ್‌ಡಿಒ 50, ಐಐಎಸ್‌ಸಿ 40, ಸಿಎಸ್‌ಐಆರ್ 38, ಎನ್‌ಐಟಿ 31, ಐಐಟಿ 23 ಮತ್ತು ಇಸ್ರೋ 6 ಪ್ರಯೋಗಾಲಯ ಮತ್ತು ಅನ್ವೇಷಣಾ ಕೇಂದ್ರಗಳನ್ನು ಹೊಂದಿದೆ. ಆದರೆ ಈ ಎಲ್ಲ ಸಂಸ್ಥೆಗಳು ಪೇಟೆಂಟ್‌ಗಾಗಿ ಸಲ್ಲಿಸಿದ ಅರ್ಜಿಗಳ ಸಂಖ್ಯೆ 781 ಪೇಟೆಂಟ್ ಅಂದರೆ ಏನು ? ಯಾವುದೇ ಒಂದು ಹೊಸ ಸರಕು ಉತ್ಪನ್ನ ಅಥವಾ ತಂತ್ರಜ್ಞಾನ ಸಂಶೋಧಿಸಿದವರಿಗೆ ಅದನ್ನು ತಯಾರಿಸುವ ಹಕ್ಕು ಒದಗಿಸುವುದಕ್ಕೆ ಪೇಟೆಂಟ್ ಎನ್ನುತ್ತಾರೆ. ಇದೊಂದು ಬೌದ್ಧಿಕ ಆಸ್ತಿ. ಭಾರತದಲ್ಲಿ ಪೇಟೆಂಟ್‌ ಅನ್ನು 20 ವರ್ಷಗಳ ಅವಧಿಗೆ ನೀಡಲಾಗುತ್ತದೆ, ಇದರಿಂದ ವ್ಯಕ್ತಿ ಅಥವಾ ಸಂಸ್ಥೆಯೊಂದು ಆವಿಷ್ಕರಿಸಿದ ವಿಷಯವನ್ನು ಮತ್ತಿನ್ನಾರೋ ಅನುಮತಿ ಇಲ್ಲದೇ ಉಪಯೋಗಿಸುವುದನ್ನು ತಡೆಯಬಹುದು. ಯಾವುದೇ ಒಬ್ಬ ಬಳಕೆದಾರ ಪೇಟೆಂಟ್ ಅನ್ನು ಉಪಯೋಗಿಸಬೇಕಾದರೆ ನಿಗದಿಪಡಿಸಿದ ಶುಲ್ಕವನ್ನು ಪಾವತಿಸಬೇಕು. ಅನುಮತಿ ಇಲ್ಲದೇ ಉಪಯೋಗಿಸುವುದು ಶಿಕ್ಷಾರ್ಹ ಅಪರಾಧ

## * ಭದ್ರತಾ ತಪಾಸಣೆಗೆ 3ಡಿ ತಂತ್ರಜ್ಞಾನ

ವಿಮಾನ ನಿಲ್ದಾಣದಲ್ಲಿ ಭದ್ರತಾ ತಪಾಸಣೆಯನ್ನು ಕೂಲಂಕುಷವಾಗಿ ಶೋಧಿಸಿ ಅದನ್ನು 3ಡಿ ಆಯಾಮದಲ್ಲಿ ಹ್ಯಾಂಡ್ ಟಿವಿ ಪರದೆಯಲ್ಲಿ ತೋರಿಸುವ ಅತ್ಯಾಧುನಿಕ ತಂತ್ರಜ್ಞಾನ ಬಂದಿದೆ. ಈ ಅತ್ಯಾಧುನಿಕ ತಂತ್ರಜ್ಞಾನವನ್ನು ಅಮೆರಿಕದ ನ್ಯೂಯಾರ್ಕ್ ನೆದರ್‌ಲೆಂಡ್‌ನ ಆಮ್‌ಸ್ಟರ್‌ಡ್ಯಾಮ್, ಇಂಗ್ಲೆಂಡ್‌ನ ಲಂಡನ್ ಅಂತಾರಾಷ್ಟ್ರೀಯ ವಿಮಾನನಿಲ್ದಾಣಗಳಲಿ ಪ್ರಯೋಗಾರ್ಥವಾಗಿ ಬಳಸಲಾಗುತ್ತಿದೆ. ಅನುಮಾನಾಸ್ಪದ ಹ್ಯಾಂಡ್‌ಬ್ಯಾಗ್ ಳನ್ನು ಕೂಲಂಕಷವಾಗಿ ಮತ್ತು ಬೇಗ ಪರಿಶೀಲಿಸುವಂತಹ ಹೊಸ ತಂತ್ರಜ್ಞಾನದ ಅವಶ್ಯಕತೆ ಭಾರತಕ್ಕೂ ಇದೆ.

## * ತಾಜ್‌ಮಹಲ್‌ ಆವರಣ ಪ್ಲಾಸ್ಟಿಕ್‌ ಮುಕ್ತ ವಲಯ



ವಿಶ್ವ ಪ್ರಸಿದ್ಧ ತಾಜ್‌ ಮಹಲ್‌ನ ಇಡೀ ಆವರಣವನ್ನು ಪ್ಲಾಸ್ಟಿಕ್‌ ಮುಕ್ತ ವಲಯವಾಗಿ ಘೋಷಿಸಿ ಈ ಪ್ರದೇಶದಲ್ಲಿರುವ ಮಾಲಿನ್ಯಕಾರಕವಾದ ಎಲ್ಲ ಕೈಗಾರಿಕೆಗಳನ್ನು ಮುಚ್ಚಲು ಉತ್ತರ ಪ್ರದೇಶ ಸರ್ಕಾರ ತೀರ್ಮಾನಿಸಿದೆ. 17ನೇ ಶತಮಾನದಲ್ಲಿ ಮೊಘಲರ ಆಡಳಿತದಲ್ಲಿ ನಿರ್ಮಾಣವಾದ ಈ ಐತಿಹಾಸಿಕ ಸ್ಮಾರಕ ಸಂರಕ್ಷಣೆಗೆ ರೂಪಿಸಿರುವ ದೂರದೃಷ್ಟಿ ಯೋಜನೆಯ (ವಿಷನ್‌ ಡಾಕ್ಯುಮೆಂಟ್‌ನ) ಮೊದಲ ಕರಡನ್ನು ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದೆ. ನ್ಯಾಯಮೂರ್ತಿಗಳಾದ ಎಂ.ಬಿ.ಲೋಕುರ್‌ ಮತ್ತು ದೀಪಕ್‌ ಗುಪ್ತಾ ಅವರಿದ್ದ ಪೀಠಕ್ಕೆ, ತಾಜ್‌ ಸಂರಕ್ಷಣೆಗೆ ಏನೆಲ್ಲ ಕ್ರಮ ಕೈಗೊಳ್ಳಲಾಗುವುದು ಎನ್ನುವುದನ್ನು ಸರ್ಕಾರ ಈ ಕರಡು ವರದಿಯಲ್ಲಿ ವಿವರಿಸಿದೆ. ವಿಶ್ವದ ಏಳು ಅದ್ಭುತಗಳಲ್ಲಿ ಒಂದಾದ ಮತ್ತು ಪ್ರಮುಖ ಪ್ರವಾಸಿ ತಾಣ. ಮುನ್ನೋಟದಲ್ಲಿ ಏನಿದೆ ತಾಜ್‌ ಮಹಲ್‌ ಒಳಗಡೆಗೆ ನೀರಿನ ಬಾಟಲಿಗಳಿಗೆ ಪ್ರವೇಶ ನಿರ್ಬಂಧ. ಸುತ್ತಮುತ್ತಲ ಪ್ರದೇಶದಲ್ಲಿ ಸಂಚಾರ ದಟ್ಟಣೆ ತಗ್ಗಿಸಲು ಕ್ರಮ. ಪಾದಚಾರಿ ಮಾರ್ಗಗಳ ನಿರ್ಮಾಣ. ಸಂಚಾರ ದಟ್ಟಣೆ ಕಡಿಮೆ ಇರುವಲ್ಲಿ ವಾಹನ ಸಂಚಾರ ಸಂಪೂರ್ಣ ನಿಷೇಧ. ಆಗ್ರಾದ ಯಮುನಾ ನದಿ ತೀರದುದ್ದಕ್ಕೂ ಪಾದಚಾರಿ ಮಾರ್ಗಗಳ ನಿರ್ಮಾಣ. ಯಮುನಾ ನದಿ ತೀರದ ಪ್ರದೇಶಗಳಲ್ಲಿ ಎಲ್ಲ ರೀತಿಯ ಕಟ್ಟಡ ಕಾಮಗಾರಿಗೆ ನಿರ್ಬಂಧ. ನದಿ

ದಂಡೆಯುದ್ದಕ್ಕೂ ಗಿಡ ಬೆಳೆಸಲು ಕ್ರಮ.

## * ನಾಲ್ಕು ಒಪ್ಪಂದಕ್ಕೆ ಭಾರತ-ಉಗಾಂಡಾ ಸಹಿ



ರವಾಂಡಾ ಪ್ರವಾಸ ಮುಗಿಸಿ ಉಗಾಂಡಾಗೆ ತೆರಳಿರುವ ಪ್ರಧಾನಿ ಮೋದಿ ಅವರು ಅಲ್ಲಿನ ಅಧ್ಯಕ್ಷರಾದ ಯೊವೇರಿ ಮುಸೆವೇನಿ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದ್ದಾರೆ. ಜತೆಗೆ, ಇಂಧನ ಮೂಲಸೌಕರ್ಯ, ಕೃಷಿ, ಡೈರಿ ವಲಯದ ಅಭಿವೃದ್ಧಿಗಾಗಿ ಉಗಾಂಡಾಗೆ 200 ದಶಲಕ್ಷ ಡಾಲರ್ ನೆರವನ್ನೂ ಘೋಷಿಸಿದ್ದಾರೆ. ನಿಯೋಗ ಮಟ್ಟದ ಮಾತುಕತೆಯ ಬಳಿಕ ರಕ್ಷಣಾ ಸಹಕಾರ, ಅಧಿಕಾರಿಗಳು ಮತ್ತು ರಾಜತಾಂತ್ರಿಕ ಪಾಸ್‌ಪೋರ್ಟ್ ಹೊಂದಿರುವವರಿಗೆ ವೀಸಾ ವಿನಾಯ್ತಿ, ಸಾಂಸ್ಕೃತಿಕ ವಿನಿಮಯ, ಮೆಟೀರಿಯಲ್ ಟೆಸ್ಟಿಂಗ್ ಲ್ಯಾಬೊರೆಟರಿ ಕ್ಷೇತ್ರದಲ್ಲಿ ಒಟ್ಟು ನಾಲ್ಕು ಒಪ್ಪಂದಗಳಿಗೆ ಸಹಿ ಹಾಕಲಾಗಿದೆ. ಕಂಪಲದಲ್ಲಿರುವ ಕ್ಯಾನ್ಸರ್ ಸಂಸ್ಥೆಗೆ ಕ್ಯಾನ್ಸರ್ ಥೆರಪಿ ಯಂತ್ರವನ್ನೂ ನೀಡಲಾಗುವುದು.ಜತೆಗೆ ಕಿಗಾಲಿಯಲ್ಲಿನ ಗ್ರಾಮವೊಂದಕ್ಕೆ 200 ಹಸುಗಳನ್ನು ಉಡುಗೊರೆಯಾಗಿ ನೀಡಿದ್ದರು.

## * ದಿನ ವಿಶೇಷ : ಆದಾಯ ತೆರಿಗೆ ದಿನ




ಆದಾಯ ತೆರಿಗೆ ಪದ್ಧತಿಗೆ 2018ಕ್ಕೆ 158 ವರ್ಷಗಳಾಗಿದ್ದು, 2010 ರಿಂದ ತೆರಿಗೆ ಇಲಾಖೆಯು ಜು.24 ಅನ್ನು ಆದಾಯ ತೆರಿಗೆ ದಿನವಾಗಿ ಪ್ರತಿ ವರ್ಷ ಆಚರಿಸುತ್ತಾ ಬಂದಿದೆ. ಶುರುವಾಗಿದ್ದು ಯಾವಾಗ? : ಭಾರತದ ಹಣಕಾಸು ಮಂಡಳಿಯ ಮೊದಲ ಸದಸ್ಯ ಜೇಮ್ಸ್ ವಿಲ್ಸನ್ ಈ ದಿನವನ್ನು ಪರಿಚಯಿಸಿದರು. 1860ರಂದು ಮೊದಲ ಬಾರಿಗೆ ಆದಾಯ ತೆರಿಗೆ ದಿನವನ್ನು ಆಚರಿಸಲಾಯಿತು. ಉದ್ದೇಶ : ಸಾರ್ವಜನಿಕರಲ್ಲಿ ತೆರಿಗೆ ಬಗ್ಗೆ ಜಾಗೃತಿ ಮೂಡಿಸುವುದು, ತೆರಿಗೆ ಪಾವತಿಯಿಂದ ದೇಶಕ್ಕೆ ಆಗುವ ಪ್ರಯೋಜನಗಳನ್ನು ವಿವರಿಸುವುದು ಈ ದಿನದ ವಿಶೇಷ. ನಮ್ಮ ದೇಶದ ಜನಸಂಖ್ಯೆಗೆ ಹೋಲಿಸಿದರೆ ಆದಾಯ ತೆರಿಗೆ ಪಾವತಿದಾರರ ಸಂಖ್ಯೆ ಶೇ.3.5 ಮಾತ್ರ. ಹೆಚ್ಚಿನ ಮೊತ್ತದ ತೆರಿಗೆ ಪಾವತಿದಾರರ ಸಂಖ್ಯೆಯೂ ಕಡಿಮೆ. 2017-18ನೇ ಹಣಕಾಸು ವರ್ಷದಲ್ಲಿ 10.2 ಲಕ್ಷ ಕೋಟಿ ರೂ. ನೇರ ತೆರಿಗೆ ಸಂಗ್ರಹವಾಗಿದೆ. ಆದಾಯ ತೆರಿಗೆ ಎಂದರೇನು? : ಯಾವುದೇ ಒಬ್ಬ ವ್ಯಕ್ತಿ ಅಥವಾ ಸಂಸ್ಥೆ ಗಳಿಸುವ ಆದಾಯದಲ್ಲಿ ಶೇಕಡವಾರು ಮೊತ್ತವನ್ನು ತೆರಿಗೆ ರೂಪದಲ್ಲಿ ಸರಕಾರಕ್ಕೆ ಪಾವತಿಸಬೇಕು. ಇದನ್ನು ಆದಾಯ ತೆರಿಗೆ ಎನ್ನುತ್ತಾರೆ. ತೆರಿಗೆ ವ್ಯಾಪ್ತಿಗೆ ಒಳಪಡುವ ಆದಾಯದ ಮೇಲೆ , ಹಿಂದೂ ಅವಿಭಕ್ತ ಕುಟುಂಬಗಳು (ಎಚ್ ಯುಎಫ್), ಕಂಪನಿಗಳು, ವ್ಯಾಪಾರಿ ಸಂಸ್ಥೆಗಳು, ಸಹಕಾರ ಸಂಘಗಳು, ಟ್ರಸ್ಟ್ ಹೀಗೆ ಇತರೇ ಯಾವುದೇ ರೀತಿಯ ಆ ವ್ಯಕ್ತಿಗಳಿಗೆ ಆದಾಯ ತೆರಿಗೆ ವಿಧಿಸಲಾಗುತ್ತದೆ. ಆದಾಯ

ತೆರಿಗೆಯನ್ನು ವ್ಯಕ್ತಿಯ ವಾರ್ಷಿಕ ಆದಾಯದ ಆಧಾರದ ಮೇಲೆ ಸಂಗ್ರಹಿಸಲಾಗುತ್ತದೆ. ವ್ಯಕ್ತಿಯಿಂದ ವ್ಯಕ್ತಿಗೆ ಆದಾಯದ ಮೂಲಗಳು ಭಿನ್ನವಾಗಿರುವುದರಿಂದ ಆದಾಯ ತೆರಿಗೆ ಕೂಡ ಭಿನ್ನವಾಗಿರುತ್ತದೆ. ಕರ್ತವ್ಯ ಮತ್ತು ಜವಾಬ್ದಾರಿ : ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳಿಗೆ ಯಾವುದೇ ಬೇನಾಮಿ ಆಸ್ತಿ , ಕಪ್ಪು ಹಣ , ಅಕ್ರಮ ಆಸ್ತಿ ಗಳಿಕೆಯಂತಹ ಯಾವುದೇ ವಿಷಯದ ಬಗ್ಗೆ ಮೂರನೇ ವ್ಯಕ್ತಿಯಿಂದ ಮಾಹಿತಿ ಬಂದರೂ ಅದನ್ನು ಆಧರಿಸಿ ದಾಳಿ ನಡೆಸುವ ಅಧಿಕಾರ ಅವರಿಗಿರುತ್ತದೆ. ಸರಕಾರಿ ಸಿಬ್ಬಂದಿ ಲಂಚ ಸ್ವೀಕರಿಸುವ ಬಗ್ಗೆ ನಿರ್ದಿಷ್ಟ ಮಾಹಿತಿ ಬಂದಾಗ ದಾಳಿ ನಡೆಸುವ, ಪತ್ತೆ ಹಚ್ಚುವ, ಮುಟ್ಟುಗೋಲು ಹಾಕಿಕೊಳ್ಳುವ , ತೆರಿಗೆ ಪಾವತಿಯಿಂದ ತಪ್ಪಿಸಿಕೊಳ್ಳುವವರ ಮನೆಯನ್ನು ಶೋಧ ಮಾಡಿ ಮುಟ್ಟುಗೋಲು ಹಾಕಿಕೊಳ್ಳುವ, ಮಾಹಿತಿ ಸಂಗ್ರಹಣೆಗೆ ತಮ್ಮ ಅಧಿಕಾರ ವ್ಯಾಪ್ತಿಯ ಯಾವುದೇ ಕಚೇರಿ , ಸ್ಥಳ ಹಾಗೂ ಮನೆಗೆ ಪ್ರವೇಶಿಸುವ ಅಧಿಕಾರ ಐಟಿ ಅಧಿಕಾರಿಗಳಿಗೆ ಇರುತ್ತದೆ. ತೆರಿಗೆ ಪಾವತಿ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು, ತೆರಿಗೆ ಪಾವತಿಸುವುದರಿಂದ ಉಂಟಾಗುವ ಪ್ರಯೋಜನ ಹೀಗೆ ಹಲವಾರು ಜವಾಬ್ದಾರಿಗಳನ್ನು ಅದಾಯ ತೆರಿಗೆ ಇಲಾಖೆ ಅಧಿಕಾರಿಗಳು ನಿರ್ವಹಿಸುತ್ತಾರೆ.

## * ಭಾರತೀಯ ಸೇನೆಗೆ ಸೇರಲಿದೆ ಎಂ-777 ಹೊವಿಟ್ಜರ್



ಅಮೆರಿಕದೊಂದಿಗೆ ಮಾಡಿಕೊಂಡಿದ್ದ ಒಪ್ಪಂದದ ಅನ್ವಯ ಅಮೆರಿಕ ಸೇನೆಯ ಪ್ರಮುಖ ಅಸ್ತ್ರ ಎಂ- 777 ಹೊವಿಟ್ಜರ್ ಫಿರಂಗಿಗಳು ಇದೇ ಸೆಪ್ಟೆಂಬರ್‌ನಲ್ಲಿ ಭಾರತೀಯ ಸೇನೆಗೆ ಸೇರಲಿವೆ. ಈ ಹಿಂದೆ ಭಾರತ, ಅಮೆರಿಕ ದೇಶದ ಬಿಎಇ ಸಿಸ್ಟಮ್ಸ್ ಸಂಸ್ಥೆಯೊಂದಿಗೆ 145 ಫಿರಂಗಿಗಳ ಖರೀದಿಗೆ ಒಪ್ಪಂದ ಮಾಡಿಕೊಂಡಿದೆ. 145ರಲ್ಲಿ 25 ತೋಪುಗಳು ಅಮೆರಿಕ ಕಂಪನಿಯ ಘಟಕದಲ್ಲಿ ತಯಾರಾಗಲಿದ್ದು ಇನ್ನುಳಿದ 120 ತೋಪುಗಳನ್ನು ಮೇಕ್ ಇನ್ ಇಂಡಿಯಾ ಯೋಜನೆ ಅಡಿಯಲ್ಲಿ ಭಾರತದಲ್ಲೇ ತಯಾರಾಗಲಿವೆ. ಅಮೆರಿಕ ಸೇನೆಯ ಪ್ರಮುಖ ಅಸ್ತವಾಗಿರುವ ಎಂ -777 ಹೊವಿಟ್ಜರ್ ಫಿರಂಗಿ 30 ಕಿ.ಮೀ ದೂರದ ಗುರಿಯನ್ನೂ ಧ್ವಂಸ ಮಾಡಬಲ್ಲ ಸಾಮರ್ಥ್ಯ ಹೊಂದಿದೆ. ಟೈಟಾನಿಯಂನಿಂದ ನಿರ್ಮಿತ : ಎಂ-771 ಫಿರಂಗಿಗಳನ್ನು ಟೈಟಾನಿಯಂನಿಂದ ಮಾಡಲಾಗಿದ್ದು, ಪ್ರತಿಗನ್ 4000 ಕಿಜಿ (4 ಟನ್) ತೂಕವಿದೆ. ಆದ್ದರಿಂದ ಇವುಗಳನ್ನು ಸಿಎಚ್ -47 ಚಿನೂಕ್ ಹೆಲಿಕಾಪ್ಟರ್‌ಗಳಿಂದ ಲಿಫ್ ಮಾಡಬಹುದು. ಹಾಗೆಯೇ ಭಾರಿ ಪ್ರಮಾಣದ ಭಾರ ಹೊತ್ತೊಯ್ಯುವ ಸಿ-17 ಗ್ಲೋಬ್ ಮಾಸ್ಟರ್ಮ ತ್ತು ಸಿ-130 ಹರ್ಕ್ಯುಲಸ್ ಟ್ರಾನ್ಸ್ ಪೋರ್ಟ್ ವಿಮಾನಗಳ ಮೂಲಕವೂ ಒಂದು ಸ್ಥಳದಿಂದ ಮತ್ತೊಂದು ಕಡೆ ಸ್ಥಳಾಂತರಿಸಬಹುದಾಗಿದೆ. ಇದಲ್ಲದೆಯೂ ಟ್ರಕ್‌ಗಳ ಸಹಾಯದಿಂದಲೂ ಪರ್ವತ ಪ್ರದೇಶದಲ್ಲಿ ಈ ಹೊವಿಟ್ಜರ್ ಗಳನ್ನು ಒಯ್ಯಬಹುದು. ಎಲ್ಲಿ ಬಳಕೆ ? : ಎಂ-77 ಅಲ್ಟ್ರಾಲೈಟ್ ಹೊವಿಟ್ಜರ್ ಗಳನ್ನು ಹೊಸದಾಗಿ ರಚಿಸಲಾಗಿರುವ ಮೌಂಟೀನ್ ಸ್ಟ್ರೈಕ್ ಕಾಪ್ಸ್ ಬಳಸಿಕೊಳ್ಳಲಿದೆ. ದೇಶದ ಉತ್ತರದ ಗಡಿ ಸುರಕ್ಷತೆಯ ಜವಾಬ್ದಾರಿಯನ್ನು ಈ ಸೇನಾ ವಿಭಾಗ ವಹಿಸಿಕೊಂಡಿದೆ. ನಾನಾ ವಿಧಗಳು : ಎಂ-777, ಎಂ 777 ಎ1, ಎಂ777ಇಆರ್. ಯಾರು ಬಳಸುತ್ತಿದ್ದಾರೆ? : ಆಸ್ಟ್ರೇಲಿಯಾ ಸದ್ಯ 35 ಫಿರಂಗಿಗಳನ್ನು ಬಳಸುತ್ತಿದೆ. ಕೆನಡಾ, ಅಮೆರಿಕ, ಯುಎಇ ದೇಶಗಳು ಬಳಸುತ್ತಿವೆ.

## * ಎಂ.ಎಸ್.ಧೋನಿ ಗರಿಷ್ಠ ತೆರಿಗೆ ಪಾವತಿದಾರ



2017-18ರಲ್ಲಿ ಒಟ್ಟಾರೆ 12.17 ಕೋಟಿ ರೂ. ತೆರಿಗೆ ಪಾವತಿ ಜಾರ್ಖಂಡ್ ಮತ್ತು ಬಿಹಾರ ವ್ಯಾಪ್ತಿಯಲ್ಲಿ ಅತ್ಯಧಿಕ ತೆರಿಗೆ ಪಾವತಿಸಿದವರ ಪಟ್ಟಿಯಲ್ಲಿ ಧೋನಿ ಅಗ್ರ ಸಾಲಿನಲ್ಲಿದ್ದಾರೆ. 2016-17ರಲ್ಲಿ ಧೋನಿ ಒಟ್ಟಾರೆ 1.24 ಕೋಟಿ ರೂ. ತೆರಿಗೆ ಪಾವತಿಸಿದ್ದರು.

## * ಅಂಧರ ಟಿ-20 ಕ್ರಿಕೆಟ್



ಆತಿಥೇಯ ಶ್ರೀಲಂಕಾ ವಿರುದ್ದ ನಡೆದ ಮೊದಲ ಐತಿಹಾಸಿಕ ಅಂಧರ ಟಿ-20 ಕ್ರಿಕೆಟ್ ಸರಣಿಯನ್ನು ಭಾರತ 4-1 ಅಂತರದಿಂದ ತನ್ನದಾಗಿಸಿಕೊಂಡಿತು. ಒಟ್ಟಾರೆ 5 ಪಂದ್ಯಗಳ ಸರಣಿಯಲ್ಲಿ ಅಂತ್ಯಕ್ಕೆ 2-1ರಿಂದ ಶ್ರೀಲಂಕಾ ಹಿನ್ನಡೆಯಲ್ಲಿತ್ತು.